ಮಾತು. ‘ಕನ್ನಡಂಗಳನ್ನು ಅದು ನಿರಾಕರಿಸುತ್ತಿದೆ. ಕನ್ನಡವನ್ನು ಸೃಷ್ಟಿಸಲು ಯತ್ನಿಸುತ್ತಿದೆ’ – ಇದು ಸುಬ್ಬಣ್ಣನವರ ಮಾತು. ಪೊಲಾಕ್‌ರ ವಾದವನ್ನು ಒಂದರ್ಥದಲ್ಲಿ ಇದು ಎತ್ತಿ ಹಿಡೀತಿದೆ. ಎಂ.ಎಂ. ಕಲಬುರ್ಗಿ ಅವರು ಮುಖ್ಯ ಮಾತೊಂದನ್ನು ಹೇಳಿದರು. ಆದರೆ, ಕನ್ನಡದ ಚರ್ಚೆಗಳ ಸಂದರ್ಭದಲ್ಲಿ ಆ ಮಾತು ಹೆಚ್ಚು ಮುಂದುವರಿಯಲಿಲ್ಲ. ಅವರು ಹೇಳ್ತಾರೆ, ‘ನೀವೆಲ್ಲಾ ಕವಿರಾಜಮಾರ್ಗವನ್ನು ಓದುವಾಗ ಸಂಸ್ಕೃತದ ಜೊತೆಗೆ ಲಿಂಕ್ ಮಾಡ್ತಾ ಇದ್ದೀರಿ. ಆದರೆ, ತೋಲ್ಕಾಪ್ಪಿಯಂ ಮತ್ತು ಕವಿರಾಜಮಾರ್ಗದ ತೌಲನಿಕ ಅಧ್ಯಯನ ನಾವು ಮಾಡಬೇಕು. ಯಾಕೆಂದರೆ, ತೋಲ್ಕಾಪ್ಪಿಯಂ ಮತ್ತು ಕವಿರಾಜಮಾರ್ಗದ ಸ್ಟ್ರಕ್ಚರ್ ಒಂದೇ ತೆರನಾದದ್ದು. ಇದುವರೆಗೂ ನಾವ್ಯಾರೂ ಆ ಕಡೆ ನೋಡಿಯೇ ಇಲ್ಲ. ಕವಿರಾಜಮಾರ್ಗ ಮಿಶ್ರಶಿಲ್ಪದ ಸಂಪ್ರದಾಯ. ನೀವು ಸಂಸ್ಕೃತ ಮತ್ತು ಕನ್ನಡ ಸಂಬಂಧದ ಮಾದರಿಯಾಗಿ ಮಾತ್ರ ನೋಡ್ತಾ ಇದ್ದೀರಿ.’ ಪೊಲಾಕ್ ಮಾದರಿಗೆ ನಾವು ಗಂಟು ಬಿದ್ದುದರಿಂದ ಇದೆಲ್ಲ ನಮಗೆ ಅರ್ಥವಾಗ್ಲಿಲ್ಲ. ಅಂದರೆ, ಸಂಸ್ಕೃತದಿಂದ ಕನ್ನಡಕ್ಕೆ ಒಂದು ವಿಶ್ವಾತ್ಮಕತೆ ಬಂತು ಅನ್ನೋ ವಾದ ಪೊಲಾಕ್ ಅವರದು. ಸುಬ್ಬಣ್ಣನವರದೂ ಹೆಚ್ಚೂ ಕಡಿಮೆ ಇದೇ ವಾದ. ಕಲಬುರ್ಗಿ ಅವರು ಸಂಪೂರ್ಣವಾಗಿ ಡೀವಿಯೇಟ್ ಆದ್ರು. ಕನ್ನಡದ ದೇಸೀ ಮನಸ್ಸು ನೋಡೋ ವಿಧಾನ ಇದು. ಬಹಳ ಮೂಲಭೂತವಾಗಿ ತುಂಬಾ ಮುಖ್ಯವಾದ ವಿಧಾನವಿದು. ಕಲಬುರ್ಗಿ ಅವರ ಪ್ರಕಾರ, ಇದು ಮಿಶ್ರಶಿಲ್ಪದ ಸಂಪ್ರದಾಯ ಯಾಕೆಂದರೆ, ಇಲ್ಲಿ ಅಲಂಕಾರ ಇದೆ, ಛಂದಸ್ಸು ಇದೆ, ಜನ, ನುಡಿ, ಸಂಸ್ಕೃತಿ, ದೇಶ, ಜನರ ಬದುಕಿನ ವಿನ್ಯಾಸ ಏನೆಲ್ಲ ಇದೆ. ದ್ರಾವಿಡ ವಿನ್ಯಾಸ ಇದೆಲ್ಲವನ್ನೂ ಒಳಗೊಂಡಿದೆ. ಇದು ಶುದ್ಧ ಅಲಂಕಾರ ಕೃತಿಯಲ್ಲ. ಇದೆಲ್ಲವನ್ನು ಗ್ರಹಿಸುವ ಕೃತಿಯನ್ನು ನೀವು ಮಿಶ್ರಶಿಲ್ಪದ ಸಂಪ್ರದಾಯವಾಗಿ ನೋಡಬೇಕು ಅಂತ ಹೇಳಿದ್ರು. ಬಹಳ ಮುಖ್ಯವಾದ ಸೂಚನೆ ಇದು. ಇಲ್ಲಿ ಕೇವಲ ಭಾಷಿಕವಾದ ಸೂಚನೆಗಳು ಮಾತ್ರ ಇಲ್ಲ ಎಂದರು. ಮುಂದುವರೆದು, ‘ಇದರ ಬೇರುಗಳು ಸಂಸ್ಕೃತದ ಕಡೆಗೆ ಹೋಗದೆ ದ್ರಾವಿಡದ ಕಡೆಗೆ ಹೋಗುತ್ತವೆ’ ಎಂದು ಹೇಳಿದರು. ಈ ಒಂದು ತಾತ್ತ್ವಿಕತೆಯನ್ನು ನಾವು ಕನ್ನಡ ಕಾವ್ಯದ ಓದಿನಲ್ಲಿ ಹೆಚ್ಚು ಬಳಸಿಕೊಳ್ಳಲೇ ಇಲ್ಲ. ಇದರಿಂದಾಗಿ ಕನ್ನಡ ವಿಮರ್ಶೆಯಲ್ಲೂ ಒಂದು ಖಾಲಿತನ ಉಳಿದುಕೊಂಡಿತು. ಷ. ಶೆಟ್ಟರ್ ಕೂಡ ಕೆಲವೊಮ್ಮೆ ದಾರಿ ತಪ್ಪಿಸಿದ್ರು. ‘ಶಂಗಂ ತಮಿಳಗಂ’ ಕೃತಿಯಲ್ಲಿ ಹೇಳಿದ್ದೇನೆಂದರೆ, ‘ಕವಿರಾಜಮಾರ್ಗ ತಮಿಳಿನಲ್ಲಿ ತೋಲ್ಕಾಪ್ಪಿಯಂ ರೀತಿಯಲ್ಲಿ ಕನ್ನಡದ ಕಾವ್ಯಮಾರ್ಗಗಳಿಗೆ ದಾರಿಯಾಗಲಿಲ್ಲ’ ಅಂತ. ಇದು ಸೂಕ್ಷ್ಮವಾಗಿ ಕವಿರಾಜಮಾರ್ಗಕಾರ ಏನನ್ನ ಹೇಳ್ತಾನೆ ಮತ್ತು ಮುಂದೆ ಕನ್ನಡ ಕಾವ್ಯಗಳು ಏನು ರಚನೆಯಾದವು ಅವು ಕವಿರಾಜಮಾರ್ಗದ ಪ್ರಶ್ನೆಗಳನ್ನು ಎತ್ತಿಕೊಂಡವೆ ಅಥವಾ ಇಲ್ಲವೆ ಅನ್ನೋ ಮೂಲಭೂತವಾದ ಪ್ರಶ್ನೆಗಳನ್ನ ಇವರು ಎತ್ತಿಕೊಳ್ಳಲೇ ಇಲ್ಲ. ಷಟ್ಟರ್ ಹೇಳ್ತಾ ಇರೋದು ಅನುಸರಿಸಲಿಲ್ಲ ಅಂತ. ಆದರೆ, ಹಾಗೆ ಅನುಸರಿಸಿದವಲ್ಲ ಅನ್ನೋದೆ ಈಗ ನಮ್ಮ ಪ್ರಶ್ನೆ. ಹಾಗೆ ನೋಡಿದರೆ, ಮುಂದಿನ ಕಾವ್ಯಗಳು ಯಾವುದನ್ನು ಕವಿರಾಜಮಾರ್ಗಕಾರ ಹೇಳಿದ್ದಾನೊ ಆ ಕಾವ್ಯಮೀಮಾಂಸೆಯನ್ನು ಅನುಸರಿಸಿದ್ದಾವೆ. ಆದ್ದರಿಂದ ಷಟ್ಟರ್ ಅವರ ಮಾತನ್ನು, ಸುಬ್ಬಣ್ಣ ಅವರ ಮಾತನ್ನು ನಾವು ನಿರಾಕರಿಸೊ ಅಗತ್ಯ ಇದೆ. ಹಾಗೇನೆ ಇವರಿಗೆ ಮೂಲ ಪಿತೃವಾದ ಶೆಲ್ಡನ್ ಪೊಲಾಕ್ ಅವರ ಮಾತನ್ನು ಕೂಡ ನಿರಾಕರಿಸೊ ಅಗತ್ಯ ಇದೆ.

